ಕ್ರ. ಸಂ.	ಸಂಸ್ಥೆಗಳ ಹೆಸರು	ರಾಜ್ಯ ವಂಟನದ ಅಡಿಯಲ್ಲಿ ರೂ:	ಜಿಲ್ಲಾ ಪರಿಷತ್ ರವರ ವತಿಯಿಂದ ರೂ.	ನಿವ್ವಳಮೊತ್ತ ರೂ:
ಬಿ) ಬೆಳಗಾವಿ ತಾಲ್ಲೂಕು				
1)	ಪಶುಚಿಕಿತ್ಸಾಲಯ, ಹಿರೆಬಾಗೇವಾಡಿ	29,459-00		
2)	" ಶಂಬರ	30,479-00		
3)	ಪಶು ಆಸ್ಪತ್ರೆ ,ಬೆಳಗಾವಿ	31,586-00	-	
4)	ಪ್ರಾ.ಪ.ಚಿ.ಹೂಡ್ಲಿ	4,302-00	-	
5)	-"- ಯಲ್ಲೂರು	7,319-00	-	
6)	-"- ಅನಗೋಳ	8,756-00	-	
7)	-"- ಉಚ್ಚಗಾಂ	9,313-00	9,692-00	
8)	-"- ಬೆಳಗುಂದಿ	8,619-00	-	
9)	-"- ನಂದಿಹಾಳ್	7,600-00	-	
10)	-"- ಸಂತೇಬಸವಾಡ್	9,319-00	-	
	ಒಟ್ಟು	**1,46,752-00**	**9,692-00**	**1,56,444-00**

ವಿಷಯ:- ಬೆಳಗಾವಿ ಜಿಲ್ಲೆಯ ಮುಚ್ಚಂಡಿ ಹಲಗೆ ತಾರಿ ಹಾಳ್ ಮತ್ತು ಕಾಕ್ತಿ ಗ್ರಾಮದ ರೈತರಿಗೆ ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರವಿಲ್ಲದೆ ತೊಂದರೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 254(442)

ಶ್ರೀ ಮೊಡಗೇಕರ್ ದೇಸಾಯಿ(ಹಿರೇಬಾಗೇವಾಡಿ)

ಮಾನ್ಯ ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ ಮುಚ್ಚಂಡಿ, ಹಲಗೆ ತಾರಿ ಹಾಳ್ ಮತ್ತು ಕಾಕ್ತಿ ಗ್ರಾಮದ ರೈತರು ಪ್ರಾಥಮಿಕ ಪಶುಚಿಕಿತ್ಸಾ ಕೇಂದ್ರಗಳಿಲ್ಲದೆ ತೊಂದರೆಯನ್ನು ಅನುಭವಿಸುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ ಮೇಲ್ಕಂಡ ಗ್ರಾಮಗಳಲ್ಲಿ ಪ್ರಾಥಮಿಕ ಪಶುಚಿಕಿತ್ಸಾಲಯಗಳನ್ನು ತೆರೆಯಲು ಕೈಗೊಂಡಿರುವ ಕ್ರಮಗಳೇನು?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ

(ಪಶುಸಂಗೋಪನಾ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

ಹೌದು.

ಸರ್ಕಾರದ ಮಂಜೂರಾತಿ ನೀಡುವ ಸಮಯದಲ್ಲಿ ಆದ್ಯತೆಯ ಮೇರೆಗೆ ಪರಿಗಣಿಸಲಾಗುವುದು.

ವಿಷಯ:- ಚೆನ್ನಪಟ್ಟಣದ ಎ.ಸಿ.ಎಫ್. ಕಛೇರಿಯ ವರ್ಗಾವಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 255(163)

ಶ್ರೀ ಬಿ.ಆರ್.ಗುರುದೇವ್ (ಸಕಲೇಶಪುರ)

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಪಟ್ಟಣವು ಅಲೂರು ಅರಕಲಗೋಡು ಚೆನ್ನರಾಯಪಟ್ಟಣ ತಾಲ್ಲೂಕ್‌ಗಳಿಗೆ ಕೇಂದ್ರ ಸ್ಥಳವಾಗಿದ್ದು ಸದರಿ ತಾಲ್ಲೂಕ್‌ಗಳ ವ್ಯಾಪ್ತಿಗೆ ಬರುವ ಎ.ಸಿ.ಎಫ್ ಕಛೇರಿಯು ಚನ್ನರಾಯಪಟ್ಟಣದಲ್ಲಿದ್ದು ಇತರೆ ತಾಲ್ಲೂಕ್‌ಗಳಿಗೆ ಬಹಳ ದೂರದಲ್ಲಿರುವುದರಿಂದ ಸಾರ್ವಜನಿಕರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದರೆ ಆ ಕಛೇರಿಯನ್ನು ಹಾಸನಕ್ಕೆ ವರ್ಗಾವಣೆ ಮಾಡಲಾಗುವುದೆ;

ಇ) ಆ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯಸಚಿವರು)

ಬಂದಿರುವುದಿಲ್ಲ.

ಆದರೆ ಹಾಸನ ವಿಭಾಗಕ್ಕೆ ಇನ್ನು ಒಂದು ಹೆಚ್ಚಿನ ಉಪ ವಿಭಾಗವನ್ನು ಹಾಸನ ಕೇಂದ್ರ ಸ್ಥಾನದಲ್ಲಿ ಸೃಷ್ಟಿಸುವ ಪ್ರಸ್ತಾವ ಪರಿಶೀಲನೆಯಲ್ಲಿದೆ. ಮೇಲಿನ ಕಂಡಿಕೆ (ಆ)ದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ : – ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆ.
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 254(164)

ಶ್ರೀ ಬಿ.ಆರ್.ಗುರುದೇವ್(ಸಕಲೇಶಪುರ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ಆಲೂರು ಮತ್ತು ಸಕಲೇಶಪುರ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರುಗಳ ಕೊರತೆಯಿಂದ ವಿದ್ಯಾರ್ಥಿಗಳಿಗೆ ಬಹಳ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಆದರಿಂದಾಗಿ ಕಳೆದ ಸಾಲಿನಲ್ಲಿ ಕೆಲವು ಶಾಲೆಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಶೇ.5ಕ್ಕಿಂತಲೂ ಫಲಿತಾಂಶ ಕಡಿಮೆ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ. ಹಾಗಿದ್ದಲ್ಲಿ, ಸರ್ಕಾರದವರು ಆ ಬಗ್ಗೆ ತೆಗೆದುಕೊಂಡಿರುವ ಕ್ರಮಗಳೇನು.

ಈ. ಆಲೂರು ಮತ್ತು ಸಕಲೇಶಪುರ ತಾಲ್ಲೂಕುಗಳಲ್ಲಿ ಖಾಲಿ ಇರುವ ಶಿಕ್ಷಕರುಗಳ ಹುದ್ದೆಗಳೆಷ್ಟು;(ವಿವರವನ್ನು ತಿಳಿಸುವುದು)

ಶ್ರೀಮತಿ. ನಾಗಮ್ಮ ಸಿ.ಕೇಶವಮೂರ್ತಿ

(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಬಂದಿದೆ.

ಬಂದಿದೆ.

ಶಾಲೆಗಳಲ್ಲಿ ಅವಶ್ಯವಿರುವ ಹುದ್ದೆಗಳನ್ನು ನಿಯೋಜನೆಯ ಮೇಲೆ ತುಂಬಿ ಫಲಿತಾಂಶವನ್ನು ಉತ್ತಮ ಪಡಿಸಲು ಸೂಕ್ತ ಕ್ರಮ ಕೈಗೊಳ್ಳಲಾಗುವುದು. ಅಲ್ಲದೆ ಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ತುಂಬಲು ಕ್ರಮ ಕೈಗೊಳ್ಳಲಾಗುವುದು.